"ಮಧುರ ಮಕ್ಕಳೇ - ಈಗ ನಿಮಗೆ ದಿವ್ಯದೃಷ್ಟಿ ಸಿಕ್ಕಿದೆ-ನಿಮಗೆ ಗೊತ್ತಿದೆ ಈ ಹಳೆಯ ಜಗತ್ತು ಸಮಾಪ್ತಿ ಆಗುತ್ತದೆ, ಆದ್ದರಿಂದ ಇದರ ಮೇಲೆ ಮಮತ್ವವನ್ನು ತೆಗೆದು ಹಾಕಬೇಕು, ಪೂರ್ತಿ-ಪೂರ್ತಿ ಬಲಿ ಆಗಬೇಕು"

ಪ್ರಶ್ನೆ: ಯಾರು ಅವಿನಾಶಿ ತಂದೆಯ ಮೇಲೆ ಪೂರ್ಣ ಬಲಿಯಾಗಿರುವ ಮಕ್ಕಳ ಚಿಹ್ನೆಗಳು ಏನಾಗಿರುತ್ತದೆ?

ಉತ್ತರ: ಉತ್ತರ: ಅವರು ತಮ್ಮ ಹಣ ಮುಂತಾದುವುಗಳನ್ನು ವ್ಯರ್ಥವಾಗಿ ಖರ್ಚು ಮಾಡುವುದಿಲ್ಲ. ಭಕ್ತಿಯಲ್ಲಿ ದೀಪಾವಳಿ ಮುಂತಾದ ಹಬ್ಬಗಳಿಗೆ ಎಷ್ಟು ಪಟಾಕಿಗಳನ್ನು ಸುಡುತ್ತಾರೆ. ಅಲ್ಪಕಾಲದ ಖುಷಿಯನ್ನು ಆಚರಣೆ ಮಾಡುತ್ತಾರೆ. ನಿಮಗೆ ಗೊತ್ತಿದೆ ಇದೆಲ್ಲಾ ಸಮಯ, ಹಣ, ಶಕ್ತಿಯನ್ನು ವ್ಯರ್ಥ ಮಾಡುವುದಾಗಿದೆ. ಇಲ್ಲಿ ನಾವು ಅಂತಹ ಖುಷಿಯನ್ನು ಆಚರಣೆ ಮಾಡುವುದಿಲ್ಲ ಏಕೆಂದರೆ ನಾವು ವನವಾಸದಲ್ಲಿ ಇದ್ದೇವೆ. ನಾವು ಈ ಮುಳ್ಳಿನ ಪ್ರಪಂಚದಿಂದ ಹೂವಿನ ಪ್ರಪಂಚಕ್ಕೆ ಹೋಗಬೇಕಾಗಿದೆ.

ಗೀತೆ: ನಿಮ್ಮನ್ನು ಪಡೆದು ಜಗತ್ತನ್ನೇ ಪಡೆದುಕೊಂಡಿದ್ದೇವೆ

ಓಂ ಶಾಂತಿ : ಮಧುರಾತಿ ಮಧುರ ಮಕ್ಕಳು ಹಾಡಿನ ಅರ್ಥವನ್ನು ತಿಳಿದುಕೊಂಡಿದ್ದೀರಿ. ಈಗ ತಾವು ಮಕ್ಕಳು ತಂದೆಯನ್ನು ಪಡೆದುಕೊಂಡಿದ್ದೀರಿ, ನಿಮಗೆ ತಂದೆ 5 ವಿಕಾರಗಳ ಮೇಲೆ ವಿಜಯವನ್ನು ಪಡೆಯುವುದರ ಅರ್ಥಾತ್ ಮಾಯೆಯ ಮೇಲೆ ಜಯಗಳಿಸಿ ಜಗತ್ಜೀತರಾಗುವ ಸಹಯೋಗ ಕೊಡುತ್ತಾರೆ. ಜಗತ್ತು ಎಂದು ಇಡೀ ಪ್ರಪಂಚಕ್ಕೆ ಕರೆಯಲಾಗುತ್ತದೆ. ಮಕ್ಕಳಿಗೆ ಗೊತ್ತಿದೆ ನಾವು ಇಡೀ ಪ್ರಪಂಚಕ್ಕೆ ಮಾಲೀಕರಾಗುತ್ತೇವೆ ಎಂದು. ಯಾವಾಗ ಮಾಲೀಕರಾಗುತ್ತೇವೆ? ಯಾವಾಗ ರಾವಣರಾಜ್ಯ ಪೂರ್ಣ ಆಗುತ್ತದೋ ಆಗ ನಾವು ಪ್ರಪಂಚಕ್ಕೆ ಮಾಲೀಕರಾಗುತ್ತೇವೆ. ರಾವಣನನ್ನು ವರ್ಷ-ವರ್ಷ ಸುಡುತ್ತಾರೆ ಏಕೆಂದರೆ ಸಂಗಮಯುಗದಲ್ಲಿ ತಂದೆ ಬಂದು ಆತ್ಮದ ದೀಪವನ್ನು ಜಾಗೃತಗೊಳಿಸಿ ಸತ್ಯಯುಗದ ಮಾಲೀಕರನ್ನಾಗಿ ಮಾಡುತ್ತಾರೆ. ದಸರ ನಂತರ ದೀಪಾವಳಿಯ ದಿನ ಮನುಷ್ಯರು ಬಹಳ ಒಳ್ಳೊಳ್ಳೆ ಬಟ್ಟೆಗಳನ್ನು ಧರಿಸುತ್ತಾರೆ. ಮುಖ್ಯವಾಗಿ ಲಕ್ಷ್ಮೀ-ನಾರಾಯಣ, ರಾಧಾ-ಕೃಷ್ಣ ಹಾಗೂ ದೇವತೆಗಳ ಮಂದಿರಕ್ಕೆ ಹೋಗುತ್ತಾರೆ. ಆದರೆ ದೇವಿಯರ ಬಗ್ಗೆ ಹಾಗೂ ಲಕ್ಷ್ಮೀ-ನಾರಾಯಣರ ಬಗ್ಗೆ ಗೊತ್ತಿಲ್ಲ. ಶಿವಶಕ್ತಿಯರು, ಬ್ರಾಹ್ಮಣಿಯರೇ ದೇವಿಯರಾಗಿದ್ದಾರೆ. ದೇವತೆಗಳ ಕೈಯಲ್ಲಿ ಅಸ್ತ್ರ-ಶಸ್ತ್ರವನ್ನು ತೋರಿಸುತ್ತಾರೆ. ವಾಸ್ತವದಲ್ಲಿ ದೇವಿಗಳ ಕೈಯಲ್ಲಿ ಅಸ್ತ್ರ ಶಸ್ತ್ರ ಇರಲಿಲ್ಲ. ಅವರು ಗುಪ್ತವಾಗಿದ್ದಾರೆ. ರಾವಣನ ಮೇಲೆ ಜಯಗಳಿಸಿದ್ದೇ ಆದರೆ ಅರ್ಧಕಲ್ಪಕ್ಕೋಸ್ಕರ ಖುಷಿ ಸ್ಥಿರವಾಗಿ ಇರುತ್ತದೆ. ಈಗ ನೀವು ಖುಷಿಯನ್ನು ಆಚರಣೆ ಮಾಡುವುದಿಲ್ಲ. ಇದು ದೀಪಾವಳಿ ಆಗಿದೆಯೇನು ಏಕೆಂದರೆ ಇವತ್ತು ದೀಪವನ್ನು ಬೆಳಗಿಸುತ್ತಾರೆ ನಾಳೆ ಹಾರಿಹೋಗುತ್ತದೆ. ದಸರ ಹಬ್ಬವೂ ಸಹ ಪ್ರತಿ ವರ್ಷ ಆಚರಣೆ ಮಾಡುತ್ತಾರೆ. ತಾವು ಬ್ರಾಹ್ಮಣರು ತಮ್ಮ ಮನೆಯಲ್ಲಿ ದೀಪಗಳನ್ನು ಬೆಳಗಿಸುವುದಿಲ್ಲ. ಮಂದಿರ ಮುಂತಾದುವುಗಳಲ್ಲಿ ದೀಪ, ಲೈಟ್ ಮುಂತಾದುವುಗಳನ್ನು ಬೆಳಗಿಸುತ್ತಾರೆ. ಮನುಷ್ಯರಿಗೆ ದೀಪಮಾಲ, ದಸರ ಅಂದರೆ ಏನು ಎನ್ನುವುದು ಗೊತ್ತಿಲ್ಲ. ಆ ಸಮಯದಲ್ಲಿ ಪೂರ್ತಿ ಭಾರತವೇ ಹೊಸದಾಗಿತ್ತು. ದೀಪ ಬೆಳಗಿಸುವುದು ಇದೆಲ್ಲಾ ಭಕ್ತಿಮಾರ್ಗವಾಗಿದೆ. ಭಕ್ತಿಮಾರ್ಗದಲ್ಲಿ ಎಷ್ಟು ಹಣ ವ್ಯರ್ಥವಾಗಿ ಖರ್ಚು ಮಾಡುತ್ತಾರೆ. ಆ ದಿನ (ದೀಪಾವಳಿಯ ದಿನ) ಎಷ್ಟು ಪಟಾಕಿಗಳನ್ನು ಸುಡುತ್ತಾರೆ. ಸಮಯ, ಹಣ, ಶಕ್ತಿಯನ್ನು ವ್ಯರ್ಥ ಮಾಡುತ್ತಾರೆ. ಇದು ಮುಳ್ಳಿನ ಕಾಡು (ಫಾರೆಸ್ಟ್ ಆಫ್ ತಾರ್ನ್ಸ್) ಆಗಿದೆ. ಮುಳ್ಳಿನ ಕಾಡಿನಲ್ಲಿ ಎಲ್ಲರೂ ಕಾಡಿನ ಜನರಾಗಿಬಿಟ್ಟಿದ್ದಾರೆ. ತಾವೂ ಸಹ ಮೊದಲು ಹಾಗೆಯೇ ಇದ್ದಿರಿ ಏನೂ ತಿಳಿಯುತ್ತಿರಲಿಲ್ಲ. ಸತ್ಯಯುಗದಲ್ಲಿ ವ್ಯರ್ಥವಾಗಿ ಖರ್ಚು ಮಾಡುವುದಿಲ್ಲ. ಇಲ್ಲಾದರೆ ವ್ಯರ್ಥವಾಗಿ ಖರ್ಚು ಮಾಡುತ್ತಾರೆ. ದಾನ-ಪುಣ್ಯಗಳನ್ನು ಮಾಡುವುದರಿಂದ ಅಲ್ಪಕಾಲದ ಫಲ ಸಿಗುತ್ತದೆ. ನಿಮಗೆ ಗೊತ್ತಿದೆ ನಾವು ಅವಿನಾಶಿ ತಂದೆಯ ಮೇಲೆ ಬಲಿ ಆಗಿದ್ದೇ ಆದರೆ ನಮ್ಮದೆಲ್ಲಾ ಅವಿನಾಶಿ ಆಗಿಬಿಡುತ್ತದೆ. ಹಳೆಯ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಪಡೆದುಕೊಳ್ಳುತ್ತೇವೆ. ತಾವು ಮಕ್ಕಳು ಮೋಹಜೀತರಾಜನ ಕಥೆಯಂತೂ ಕೇಳಿದ್ದೀರಿ. ಈ ಕಥೆ ಸತ್ಯಯುಗದ್ದಲ್ಲ ಏಕೆಂದರೆ ಅಲ್ಲಿ ಅಕಾಲ ಮೃತ್ಯು ಇರುವುದಿಲ್ಲ. ಇದು ಕೇವಲ ಆ ಸಮಯದಲ್ಲಿ ಎಲ್ಲರೂ ನಷ್ಟೋಮೋಹ, ಮೋಹಜೀತರಾಗಿರುತ್ತಾರೆ ಎಂದು ಉದಾಹರಣೆ ಕೊಡುವುದಕ್ಕಾಗಿ ಕಥೆಯನ್ನು ಮಾಡಲಾಗಿದೆ. ಶರೀರ ಸಹಿತವಾಗಿ ಹಳೆಯ ಪ್ರಪಂಚದ ಮೇಲೆ ಮಮತ್ವವನ್ನು ತೆಗೆದು ಹಾಕಬೇಕು. ಏಕೆಂದರೆ ತಾವು ಹೊಸ ಪ್ರಪಂಚಕ್ಕೆ ಹೋಗುತ್ತಿದ್ದೀರಿ. ಹಳೆಯ ಪ್ರಪಂಚದ ಜೊತೆ ಯಾರಿಗಾದರೂ ಮಮತ್ವ ಇರುತ್ತದೆಯೇನು? ಇದಕ್ಕೆ ಬೇಹದ್ದಿನ ಸನ್ಯಾಸ ಎಂದು ಕರೆಯಲಾಗುತ್ತದೆ. ಬಾಬಾ ಕೇವಲ ಈ ಹಳೆಯ ಪ್ರಪಂಚವನ್ನು ಮರೆಯಿರಿ ಎಂದು ಹೇಳುವುದಿಲ್ಲ ಆದರೆ ಈ ಕಣ್ಣಿಂದ ಏನೆಲ್ಲಾ ನೋಡುತ್ತೀರೋ ಎಲ್ಲವನ್ನು ಮರೆಯಿರಿ ಏಕೆಂದರೆ ಈಗ ಎಲ್ಲಾ ಸಮಾಪ್ತಿ ಆಗುವುದಿದೆ ಎನ್ನುವ ದಿವ್ಯದೃಷ್ಟಿ ಸಿಕ್ಕಿದೆ. ಹಳೆಯ ಪ್ರಪಂಚ ವಿನಾಶ ಆಗಿಯೇ ಇದೆ ಹಾಗೂ ಹೊಸ ಪ್ರಪಂಚ ಸ್ಥಾಪನೆ ಆಗುವುದಿದೆ. ಶಿವತಂದೆ ನಮಗೆ ರಾಜ್ಯವನ್ನು ಕೊಡುತ್ತಾರೆ. ಶಿವಬಾಬಾನ ಹೆಸರೇ ಸದಾ ಶಿವ ಆಗಿದೆ ಏಕೆಂದರೆ ಅವರಿಗೆ ತನ್ನದೇ ಆದ ಶರೀರವಿಲ್ಲ. ಬ್ರಹ್ಮಾ-ವಿಷ್ಣು-ಶಂಕರರಿಗೂ ಸಹ ತಮ್ಮ-ತಮ್ಮ ಶರೀರವಿದೆ. ಅವರು ಮೇಲೆ ಇರುತ್ತಾರೆ. ಅಮರನಾಥ ಅಮರರನ್ನಾಗಿ ಮಾಡಲು, ಅಮರಲೋಕಕ್ಕೆ ಕರೆದೊಯ್ಯಲು ಕಥೆಯನ್ನು ತಿಳಿಸುತ್ತಾರೆ. ತಾವು ಮಕ್ಕಳು ಈಗ ಹೂವು ಆಗುತ್ತಿದ್ದೀರಿ. ಮುಳ್ಳನ್ನು ಹೂವನ್ನಾಗಿ ಮಾಡಲು ಪರಿಶ್ರಮ

ಮಾಡಬೇಕಾಗುತ್ತದೆ. ಇಲ್ಲಂತೂ ಎಲ್ಲರೂ ಮುಳ್ಳಿನ ಸಮಾನ ಇದ್ದಾರೆ. ಒಬ್ಬರಿಗೊಬ್ಬರು ಮುಳ್ಳು ಚುಚ್ಚುತ್ತಿರುತ್ತಾರೆ, ಅದನ್ನು ಕೇಳಲೇ ಬೇಡಿ. ಅಂದಾಗ ತಂದೆಯು ತಿಳಿಸುತ್ತಾರೆ ನೀವು ಈಗ ಯಾರಿಗೂ ಮುಳ್ಳನ್ನು ಚುಚ್ಚಬಾರದು. ಕಾಮ ವಿಕಾರವನ್ನು ನಡೆಸಬಾರದು. ಈ ಕಾಮದ ಹಿಂಸೆ ಆದಿ-ಮಧ್ಯ-ಅಂತ್ಯ ದುಃಖವನ್ನು ಕೊಡುತ್ತದೆ. ಇಲ್ಲಿಯಾದರೆ ಜನ್ಮ-ಜನ್ಮಾಂತರ ದುಃಖಿ ಆಗುತ್ತಿರುತ್ತಾರೆ. ಈಗ ನೀವು ಕಾಮ ವಿಕಾರವನ್ನು ನಡೆಸಬಾರದು ಎಂದು ತಂದೆಯು ಹೇಳುತ್ತಾರೆ.

ಈಗ ನೀವು ದಸರ ಆಚರಣೆ ಮಾಡುತ್ತಿದ್ದೀರಿ ಮತ್ತೆ ದೀಪಾವಳಿ ಬರುತ್ತದೆ. ಸತ್ಯಯುಗದಲ್ಲಿ ದೀಪಾವಳಿ ಆಚರಣೆ ಮಾಡುವುದಿಲ್ಲ. ಅಲ್ಲಿ ಸ್ವಯಂ ಲಕ್ಷ್ಮಿ ರಾಜ್ಯ ಮಾಡುತ್ತಾರೆ, ನಂತರ ಅವರಿಗೆ ಪೂಜೆ ಮಾಡುವುದಿಲ್ಲ. ಮನುಷ್ಯರು ಯಾರು ಮಂದಿರದಲ್ಲಿ ಇರುತ್ತಾರೋ ಅವರಿಗೆ ದೇವತೆಗಳ ಚರಿತ್ರೆ ಗೊತ್ತಿಲ್ಲ. ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ನೀವು ಮಕ್ಕಳು ರೂಪ ಬಸಂತರು (ಜ್ಞಾನದ ಮಳೆ ಸುರಿಸುವವರು) ಆಗಿದ್ದೀರಿ. ನಾನೂ ಸಹ ಶರೀರವನ್ನು ಧಾರಣೆ ಮಾಡಿದ್ದೇನೆಂದು ತಂದೆ ಹೇಳುತ್ತಾರೆ. ಆದರೆ ನಾನು ಧಾರಣೆ ಮಾಡುವ ರೀತಿ ಬೇರೆಯಾಗಿದೆ. ಈಗ ನಮಗೆ ದೀಪಾವಳಿಯ ಖುಷಿ ಆಗುವುದಿಲ್ಲ ಏಕೆಂದರೆ ನಾವು ವನವಾಸದಲ್ಲಿ ಇದ್ದೇವೆ. ನಾವು ತಾಯಿ ಮನೆಯಿಂದ ಅತ್ತೆ ಮನೆಗೆ ಹೋಗುತ್ತಿದ್ದೇವೆ. ತಂದೆಯು ಹೇಳುತ್ತಾರೆ 108 ತೂತು ಇರುವ ಬಟ್ಟೆಯನ್ನು ಧರಿಸಿ ಆಗ ದೇಹಾಭಿಮಾನ ಬಿಟ್ಟು ಹೋಗುತ್ತದೆ. ಈ ಸಮಯದಲ್ಲಿ ತಾವು ಮುಳ್ಳಿನ ಪ್ರಪಂಚದಿಂದ ಹೂವಿನ ಪ್ರಪಂಚಕ್ಕೆ ಹೋಗುತ್ತಿದ್ದೀರಿ. ಚೆನ್ನಾಗಿ ಓದುವುದರಿಂದ ನವಾಬರಾಗುತ್ತೀರಿ ಎಂದು ಹೇಳುತ್ತಾರೆ. ನಾನು ನಿಮ್ಮನ್ನು ನರನಿಂದ ನಾರಾಯಣರನ್ನಾಗಿ ಮಾಡುತ್ತೇನೆ. ಅಂದಾಗ ಶ್ರೇಷ್ಠ ಪುರುಷಾರ್ಥವನ್ನು ಮಾಡಬೇಕು. ನಾನು ಓದಿಸುತ್ತಿದ್ದೇನೆ ಅಂದಾಗ ಏಕೆ ಪದವಿಯನ್ನು ಕೆಡಿಸಿಕೊಳ್ಳುತ್ತೀರಿ? ಮಾತಾ-ಪಿತರನ್ನು ಏಕೆ ಫಾಲೋ ಮಾಡುವುದಿಲ್ಲ. ತಂದೆಯು ಯಾರು ಚೆನ್ನಾಗಿ ಓದುತ್ತಾರೋ ಅವರು ರಾಜ್ಯದಲ್ಲಿ ಬರುತ್ತಾರೆಂದು ಸಾಕ್ಷಾತ್ಕಾರ ಮಾಡಿಸಿದ್ದಾರೆ. ನಾವು ಸ್ವರ್ಗವಾಸಿ ಆಗಲು ಓದುತ್ತಿದ್ದೇವೆಂದು ನಿಮಗೆ ಗೊತ್ತಿದೆ. ಮನುಷ್ಯರು ಸತ್ತು ಹೋದರೆ ಸ್ವರ್ಗವಾಸಿ ಆಗುತ್ತಾರೆಂದು ತಿಳಿದುಕೊಂಡಿದ್ದಾರೆ. ತಂದೆಯೇ ಬಂದು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಾರೆ ಮತ್ತು ರಾವಣ ಪುನಃ ನರಕವಾಸಿಯನ್ನಾಗಿ ಮಾಡುತ್ತಾನೆ ಎಂದು ನಿಮಗೆ ಗೊತ್ತಿದೆ. ಮನುಷ್ಯರು ಹಿಂದು-ಚೈನಾದವರು ಸಹೋದರ-ಸಹೋದರರೆಂದು, ಮತ್ತೆ ಒಬ್ಬರಿಗೊಬ್ಬರು ದುಃಖವನ್ನು ಕೊಡುತ್ತಿರುತ್ತಾರೆ. ತಂದೆ-ತಾಯಿಯಿಂದ ಸುಖದ ಗನಿ ಸಿಗುತ್ತಿದೆ ಎಂದು ನಿಮಗೆ ಗೊತ್ತಿದೆ. ಮತ್ತೆ ನಿಧ-ನಿಧಾನಕ್ಕೆ ಕಲೆಗಳು ಕಡಿಮೆ ಆಗುತ್ತದೆ. ಏರುವ ಕಲೆಯಿಂದ ಎಲ್ಲರ ಕಲ್ಯಾಣವಾಗುತ್ತದೆ ಎಂದು ಹೇಳುತ್ತಾರೆ ಅಂದಾಗ ಈಗ ಎಲ್ಲರ ಕಲ್ಯಾಣವಾಗುತ್ತದೆ. ಕೆಲವರು ನರಕವಾಸಿಯಿಂದ ಸ್ವರ್ಗವಾಸಿ ಆಗುತ್ತಾರೆ, ಇನ್ನೂ ಕೆಲವರು ಶಾಂತಿಧಾಮ ನಿವಾಸಿ ಆಗುತ್ತಾರೆ ಅಂದಾಗ ಎಲ್ಲರ ಕಲ್ಯಾಣ ಆಗಿದೆ. ಸತ್ಯಯುಗದಲ್ಲಿ ಯಾವುದೇ ದುಃಖ ಕೊಡುವ ವಸ್ತು ಇರುವುದಿಲ್ಲ. ದೊಡ್ಡ ವ್ಯಕ್ತಿಗಳ ಫರ್ನೀಚರ್ (ವಸ್ತುಗಳು) ಕೂಡ ಚೆನ್ನಾಗಿರುತ್ತದೆ. ಅಲ್ಲಿ ದುಃಖದಾಯಿ ಪ್ರಾಣಿಗಳು ಮುಂತಾದವು ಇರುವುದಿಲ್ಲ ಏಕೆಂದರೆ ಅಲ್ಲಿ ಒಳ್ಳೆಯ ಫರ್ನೀಚರ್ ಬೇಕಾಗುತ್ತದೆ. ಅದಕ್ಕೆ ಸ್ವರ್ಗ ಎಂದು ಕರೆಯಲಾಗುತ್ತದೆ. ಅಲ್ಲಾಹವಲುದ್ದೀನಿನ ಆಟ ಆಗಿದೆ, ಜಾದು ಮಾಡುವುದರಿಂದ ರಾಜ್ಯಭಾಗ್ಯ ಸಿಗುತ್ತದೆ. ಅಲ್ಲಾಹ್ ಅರ್ಥಾತ್ ತಂದೆ ಅವಲಿದ್ದೀನ್ ಅರ್ಥಾತ್ ಆದಿ ಸನಾತನ ದೇವೀ-ದೇವತಾ ಧರ್ಮ ಸ್ಥಾಪನೆ ಮಾಡುತ್ತಾರೆ. ಅಂದಾಗ ತಂದೆ ಸೆಕೆಂಡಿನಲ್ಲಿ ವೈಕುಂಠದ ಮಾಲೀಕರನ್ನಾಗಿ ಮಾಡುತ್ತಾರೆ. ತಂದೆ ಅವಲುದ್ದೀನಿನ (ಸ್ವರ್ಗದ) ಸಾಕ್ಷಾತ್ಕಾರ ಮಾಡಿಸುತ್ತಾರೆ. ಮಕ್ಕಳು ಸಾಕ್ಷಾತ್ಕಾರದಲ್ಲಿ ಹೋಗಬೇಕೆಂದು ಹೇಳುವುದು-ಈ ರೀತಿ ಅಲ್ಲ. ಧ್ಯಾನಿಗಿಂತಲೂ ಜ್ಞಾನಿ ನನಗೆ ಪ್ರಿಯವೆಂದು ತಂದೆಯು ಹೇಳುತ್ತಾರೆ. ಧ್ಯಾನದಲ್ಲಿ ಮಾಯೆಯ ಪ್ರವೇಶತೆ ಆಗುತ್ತದೆ. ಜ್ಞಾನದಲ್ಲಿ ಮಾಯೆ ಬರುವುದಿಲ್ಲ. ಯಾರು ನೌಧಾ ಭಕ್ತಿ ಮಾಡುತ್ತಾರೋ ಅವರಿಗೆ ತಂದೆ ಸಾಕ್ಷಾತ್ಕಾರ ಮಾಡಿಸುತ್ತಾರೆ. ಇಲ್ಲಿ ಯಾವುದೇ ನೌಧಾ ಭಕ್ತಿ ಮಾಡಲಾಗುವುದಿಲ್ಲ. ಚಿಕ್ಕ-ಚಿಕ್ಕ ಮಕ್ಕಳಿಗೂ ಸಹ ಸಾಕ್ಷಾತ್ಕಾರ ಆಗುತ್ತದೆ. ಒಂದುವೇಳೆ ಧ್ಯಾನದಲ್ಲಿ ಹೋಗುವ ಅಭ್ಯಾಸ ಆಗಿಬಿಟ್ಟರೆ ವಿದ್ಯೆಯನ್ನು ಓದಲು ಸಾಧ್ಯವಿಲ್ಲ. ಶುರುವಿನಲ್ಲಿ ಎಷ್ಟು ಧ್ಯಾನದ ಪ್ರೋಗ್ರಾಂ ತೆಗೆದುಕೊಂಡು ಬರುತ್ತಿದ್ದರು ಆದರೆ ಈಗ ಇಲ್ಲವೇ ಇಲ್ಲ. ಜ್ಞಾನಿ ಆತ್ಮರಿಗೆ ಯಾವುದೇ ಸಂಶಯ ಬರುವುದಿಲ್ಲ. ಸಂಶಯ ಬಂದರೆ ವಿದ್ಯೆಯನ್ನು ಬಿಡುತ್ತಾರೆ ಅಂದರೆ ತಂದೆಯನ್ನು ಬಿಡುವುದು. ಈಗ ಸೂರ್ಯವಂಶಿ ದೇವೀ-ದೇವತೆಗಳ ರಾಜಧಾನಿ ಸ್ಥಾಪನೆ ಆಗುತ್ತಿದೆ. ಮತ್ತೆ ಧರ್ಮ ಸ್ಥಾಪಕರು ಯಾವುದೇ ರಾಜಧಾನಿಯನ್ನು ಸ್ಥಾಪನೆ ಮಾಡುವುದಿಲ್ಲ. ಯಾವಾಗ ಧರ್ಮದ ವೃದ್ಧಿ ಆಗುತ್ತದೋ ಆಗ ಅವರ ರಾಜ್ಯ ನಡೆಯುತ್ತದೆ. ಅಂದಾಗ ನೀವು ಈಗ ವಿಶ್ವದ ಮಾಲೀಕರಾಗುತ್ತಿದ್ದೀರಿ. ಯಾರಾದರು ಹೊಸಬರು ಬಂದಾಗ ಪರಮಪಿತ ಪರಮಾತ್ಮನ ಜೊತೆ ನಿಮ್ಮ ಸಂಬಂಧ ಏನು? ಎಂದು ಕೇಳಬೇಕು. ತಂದೆ ಎಂದು ಹೇಳುತ್ತಾರೆ. ತಂದೆ ಸ್ವರ್ಗ ಸ್ಥಾಪನೆ ಮಾಡುತ್ತಾರೆ ಹಾಗೂ ರಾವಣ ನರಕ ಸ್ಥಾಪನೆ ಮಾಡುತ್ತಾರೆ, ಯಾರು ಸ್ವರ್ಗವನ್ನು ಮಾಡಿದ್ದಾರೋ ಅವರ ಪೂಜೆ ಮಾಡುತ್ತಾರೆ, ಯಾರು ನರಕವನ್ನು ಮಾಡಿದ್ದಾರೋ ಅವರನ್ನು ಸುಡುತ್ತಾರೆ ಏಕೆಂದರೆ ನರಕದಲ್ಲಿ ಮನುಷ್ಯರು ಕಾಮ ಚಿತೆಯ ಮೇಲೆ ಸುಟ್ಟುಹೋಗುತ್ತಾರೆ, ಆ ಕಾರಣ ಕೋಪದಲ್ಲಿ ಬಂದು ರಾವಣನನ್ನು ಸುಡುತ್ತಾರೆ. ಆದರೆ ರಾವಣ ಸುಡುವುದಿಲ್ಲ. ಕೇವಲ ಹೇಳುತ್ತಾರೆ ಪರಂಪರೆಯಿಂದ ನಡೆಯುತ್ತಿದೆ ಎಂದು. ಆದರೆ ಪರಂಪರೆಯ ಅರ್ಥವನ್ನು ತಿಳಿದುಕೊಂಡಿಲ್ಲ. ಶತೃವಿನ ವಿಗ್ರಹವನ್ನು ಸುಟ್ಟುಹಾಕುತ್ತಾರೆ. ಆದರೆ ರಾವಣನನ್ನು ಏಕೆ ಸುಡುತ್ತಾರೆ? ಏಕೆಂದರೆ ರಾವಣ ನಿಮ್ಮನ್ನು ಸುಟ್ಟು ಹಾಕುತ್ತಾನೆ. ನೀವು ರಾವಣನನ್ನು ಸುಟ್ಟು ಹಾಕುತ್ತೀರಿ, ಆದರೆ ಮನುಷ್ಯರು ಏನೂ ತಿಳಿದುಕೊಂಡಿಲ್ಲ. ಸತ್ಯಯುಗದಲ್ಲಿ ಸಂಪೂರ್ಣ ನಿರ್ವಿಕಾರಿಗಳು ಇರುತ್ತಾರೆ ಅಲ್ಲಿ ರಾವಣನನ್ನು ಸುಡುವುದಿಲ್ಲ. ಅದಕ್ಕೆ ನಿರ್ವಿಕಾರಿ ಪ್ರಪಂಚ ಎಂದು ಕರೆಯಲಾಗುತ್ತದೆ, ನಾವು ಪ್ಯಾರಡೈಜ್ವಾಸಿ ಆಗಲು ತಂದೆ ನಮಗೆ ಸ್ವರ್ಗದ ಆಸ್ತಿಯನ್ನು ಕೊಡುತ್ತಿದ್ದಾರೆ. ರಾವಣ ಶ್ರಾಪವನ್ನು ಕೊಡುತ್ತಾನೆ. ರಾವಣ ಎಂದು ಯಾರಿಗೆ ಕರೆಯಲಾಗುತ್ತದೆ. ಸ್ತ್ರೀಯಲ್ಲಿ ಇರುವ 5 ವಿಕಾರ, ಪುರುಷನ 5 ವಿಕಾರಕ್ಕೆ ರಾವಣ ಎಂದು

ಕರೆಯಲಾಗುತ್ತದೆ. ಸತ್ಯಯುಗದಲ್ಲಿ ಈ ವಿಕಾರ ಇರುವುದಿಲ್ಲ. ಸನ್ಯಾಸಿಗಳಂತೂ ನಂತರ ಬರುತ್ತಾರೆ. ಈಗಂತೂ ದೇವತಾ ಧರ್ಮ ಇಲ್ಲವೇ ಇಲ್ಲ. ಅದು ಪುನಃ ಸ್ಥಾಪನೆ ಆಗುತ್ತಿದೆ. 108ರ ಮಾಲೆ ಆಗುತ್ತಿದೆ ಅಂದಾಗ ಪ್ರಜೆಗಳೂ ಸಹ ಬೇಕಲ್ಲವೇ. ಜಯಪೂರಿನ ರಾಜಾ ಒಬ್ಬರೇ ಇದ್ದರು ಆದರೆ ಎಷ್ಟು ಪ್ರಜೆಗಳು ಇದ್ದರು. ಈಗ ಮಾಲೆ ತಯಾರಾಗುತ್ತಿದೆ. ಪ್ರಜೆಗಳೂ ಸಹ ಬೇಕಲ್ಲವೇ. ಯಾರು ಇಲ್ಲಿ ಮಕ್ಕಳಾಗಿ ಪುನಃ ಹೋಗುತ್ತಾರೋ ಅವರು ಪ್ರಜೆಗಳಲ್ಲಿ ಹೋಗಿಬಿಡುತ್ತಾರೆ. ಗೃಹಸ್ಥ ವ್ಯವಹಾರದಲ್ಲಿ ಇರುತ್ತಾ ಜೀವನ್ಮುಕ್ತಿ ಬೇಕೆಂದು ಹೇಳುತ್ತಾರೆ. ಜೀವನ್ಮುಕ್ತಿ ಒಂದೇ ಅಲ್ಲ ಪೂರ್ಣ ವಂಶ ಬೇಕು. ಅಷ್ಟವಕ್ರ ಗೀತೆಯಲ್ಲಿ ಸೆಕೆಂಡಿನಲ್ಲಿ ಜೀವನ್ಮುಕ್ತಿ ಸಿಕ್ಕಿದೆ ಎಂದು ಬರೆದಿದ್ದಾರೆ. ಆದರೆ ಹೇಗೆ ಸಿಕ್ಕಿತು? ಅದು ಗೊತ್ತಿಲ್ಲ. ಆದಿ ಸನಾತನ ದೇವೀ-ದೇವತಾ ಧರ್ಮ ಬಹಳ ಸುಖ ಕೊಡುವಂತಹದ್ದಾಗಿದೆ. ರಾಜ್ಯಭಾಗ್ಯ ಸಿಗುತ್ತದೆ ಅಂದಾಗ ನಾವು ಏಕೆ ಶ್ರೀಮತದ ಮೇಲೆ ನಡೆಯಬಾರದು. ನಾವು ಏಕೆ ಕಮಲಪುಷ್ಪ ಸಮಾನರಾಗಬಾರದು! ತಾವು ಬ್ರಾಹ್ಮಣರಾಗಿದ್ದೀರಿ. ಅಂದಾಗ ಶಂಖು, ಚಕ್ರ, ಗದಾ, ಕಮಲದ ಹೂವು ತಮ್ಮ ಹತ್ತಿರ ಇದೆ.

ಮನುಷ್ಯರು ದೀಪಾವಳಿಯ ದಿವಸ ಕೇವಲ ಒಂದು ದಿನ ಹೊಸ ಬಟ್ಟೆಯನ್ನು ಹಾಕಿಕೊಳ್ಳುತ್ತಾರೆ, ಮಂದಿರಗಳಿಗೆ ಹೋಗುತ್ತಾರೆ. ಕೃಷ್ಣಜನ್ಮಾಷ್ಟಮಿಗೆ ಹೊಸ ಬಟ್ಟೆಯನ್ನು ಧರಿಸುವುದಿಲ್ಲ, ದೀಪಾವಳಿಯ ದಿನ ಹೊಸ ಬಟ್ಟೆಯನ್ನು ಧರಿಸುತ್ತಾರೆ, ಎಲ್ಲಾ ಹೊಸದು. ಆ ದಿನ ಅಂಗಡಿಯವರು ತಮ್ಮ ಹಳೆಯ ಖಾತೆಯನ್ನು ಸಮಾಪ್ತಿ ಮಾಡಿ ಹೊಸದನ್ನು ಶುರು ಮಾಡುತ್ತಾರೆ. ತಂದೆ ಸಂಪಾದನೆ ಮಾಡಿಸುತ್ತಾರೆ, ರಾವಣ ನಷ್ಟ ಮಾಡಿಸುತ್ತಾನೆ. ಹೇಗೆ ಲಾಭವಾಗುತ್ತದೆ? ಮನ್ಮನಾಭವ, ಮಧ್ಯಾಜೀಭವ. ವಿಷ್ಣು ಮಧ್ಯದಲ್ಲಿ ಇದ್ದಾರಲ್ಲವೇ. ಮಧ್ಯಾಜಿಭವ ಅರ್ಥಾತ್ ತಂದೆ ಬ್ರಹ್ಮನ ಮೂಲಕ ವಿಷ್ಣುಪುರಿಯನ್ನು ಸ್ಥಾಪನೆ ಮಾಡುತ್ತಾರೆ. ಅಂದಾಗ ಹಳೆಯ ಪ್ರಪಂಚ ವಿನಾಶವಾಗುತ್ತದೆ. ಅಂದಾಗ ಶಿವಬಾಬಾ ಕಲಿಯುಗ ಅಂತ್ಯದಲ್ಲಿ ಬರುತ್ತಾರೆ ಮತ್ತೆ ಸತ್ಯಯುಗದ ಆದಿ ಆಗುತ್ತದೆ. ಬ್ರಹ್ಮನ ಮೂಲಕ ಸ್ಥಾಪನೆ ಎಂದೂ ಸಹ ಬರೆದಿದ್ದಾರೆ. ಬ್ರಹ್ಮಾ ಅಂತೂ ಪ್ರಜಾಪಿತನಾಗಿದ್ದಾರಲ್ಲವೇ. ಅಂದಾಗ ತಾವು ಯಾರ ಮಕ್ಕಳಾಗಿದ್ದೀರಿ? ಶಿವನ ಮಕ್ಕಳಾಗಿದ್ದೀರೋ ಅಥವಾ ಬ್ರಹ್ಮನ ಮಕ್ಕಳಾಗಿದ್ದೀರೋ? ನೀವೇ ತಂದೆ-ತಾಯಿ ಎಂದು ಹೇಳುತ್ತಾರೆ ಸರಿಯಾಗಿ ಪ್ರಾಕ್ಟಿಕಲಿನಲ್ಲಿ ಮಾತಾ-ಪಿತಾ ಈಗ ಇದ್ದಾರೆ. ವಿದ್ಯೆಯನ್ನು ಓದಿ ಮತ್ತೆ ಆಸ್ತಿಯನ್ನು ಪಡೆದುಕೊಳ್ಳುತ್ತಿದ್ದೀರಿ ಮತ್ತೆ ರಾವಣ ಬಂದು ದುಃಖಿಯನ್ನಾಗಿ ಮಾಡುತ್ತಾನೆ. ದುಃಖವೂ ಸಹ ನಿಧ-ನಿಧಾನಕ್ಕೆ ವೃದ್ಧಿ ಆಗುತ್ತದೆ. ಈ ಕಲಿಯುಗ ವಿಷಯಸಾಗರವಾಗಿದೆ, ಸತ್ಯಯುಗ ಕ್ಷೀರಸಾಗರವಾಗಿದೆ. ವಿಷ್ಣುವಿಗೆ ಕ್ಷೀರಸಾಗರದಲ್ಲಿ ತೋರಿಸುತ್ತಾರೆ. ಅವರಿಗೆ ದಸರ-ದೀಪಾವಳಿಯ ಕುರಿತು ಏನು ಗೊತ್ತು, ನಿಮಗಾದರೆ ಚೆನ್ನಾಗಿ ಗೊತ್ತಿದೆ, ನಾವಂತೂ ರಹಸ್ಯವನ್ನು ತಿಳಿದುಕೊಂಡಿದ್ದೇವೆ. ನೆನ್ನೆ ಸ್ವರ್ಗದಲ್ಲಿ ಇದ್ದವರು ಈಗ ನರಕದಲ್ಲಿ ಇದ್ದೇವೆಂದು ತಿಳಿದುಕೊಂಡಿದ್ದೀರಿ. ಮತ್ತೆ ನಾಳೆ ಸ್ವರ್ಗದಲ್ಲಿ ಇರುತ್ತೇವೆ. ನಾಳೆ ಎಂದು ಏಕೆ ಹೇಳುತ್ತೀರಿ? ಏಕೆಂದರೆ ರಾತ್ರಿ ನಂತರ ಹಗಲು ಬರುತ್ತದೆ. ಯಾರಾದರೂ ಬಂದರೆ ಆಶ್ರಮ ಯಾರದಾಗಿದೆ? ಎಂದು ಕೇಳಿ. ಪ್ರಜಾಪಿತ ಬ್ರಹ್ಮಾ ಎನ್ನುವ ಹೆಸರು ಕೇಳಿದಿರಾ? ಇಷ್ಟು ಜನ ಬ್ರಹ್ಮಾಕುಮಾರ-ಕುಮಾರಿಯರಿದ್ದಾರೆ ಅಂದಾಗ ಬ್ರಹ್ಮಾ ತಂದೆ ಆಗಿದ್ದಾರಲ್ಲವೇ. ತಂದೆಯಿಂದ ಆಸ್ತಿಯೇ ಸಿಗುತ್ತದೆ. ತಂದೆಯು ಹೇಳುತ್ತಾರೆ ನನ್ನನ್ನು ನೆನಪು ಮಾಡಿದ್ದೇ ಆದರೆ ಮಧ್ಯಾಜಿಭವ. ತಂದೆ ವ್ಯಾಪಾರ ಮಾಡಬೇಡಿ ಎಂದು ಹೇಳುವುದಿಲ್ಲ. ತಂದೆಯು ಹೇಳುತ್ತಾರೆ ವ್ಯಾಪಾರ ಭಲೆ ಮಾಡಿ ಆದರೆ ತಂದೆಯನ್ನು ನೆನಪು ಮಾಡಿ ಏಕೆಂದರೆ ಅವರಿಂದ ಆಸ್ತಿ ಸಿಗುತ್ತದೆ. ಇಲ್ಲಿ ಭಯ ಭೀತಿ ಇರುತ್ತದೆ, ಸ್ಥಳಕ್ಕೆ ಭಯ ಭೀತಿ ಎಂದು ಹೇಳುವುದಿಲ್ಲ. ಶಾಲೆನಲ್ಲೂ ಸಹ ಭಯಬೀತಿ ಇರುತ್ತದೆ, ಆದ್ದರಿಂದ ವಿದ್ಯಾರ್ಥಿ ಜೀವನ ಒಳ್ಳೆಯ ಜೀವನ ಎಂದು ಹೇಳಲಾಗುತ್ತದೆ. ಇದು ಬೇಹದ್ದಿನ ವಿದ್ಯೆಯಾಗಿದೆ. ಬೇಹದ್ದಿನ ಚರಿತ್ರೆ-ಭೂಗೋಳದ ಬಗ್ಗೆ ನಿಮಗೆ ಗೊತ್ತಿದೆ. ಶಾಲೆಗೆ ಹೋಗಿ ಬೇಹದ್ದಿನ ಚರಿತ್ರೆ ಭೂಗೋಳ ಅಂದರೆ ಏನು ಎಂದು ಕೇಳಿ. ಅವರಿಗೆ ತಾವಂತೂ ಹದ್ದಿನ ಚರಿತ್ರೆ-ಭೂಗೋಳ ಓದಿಸುತ್ತೀರಿ ಎಂದು ಹೇಳಿ. ನಾವು ನಿಮಗೆ ಈ ಲಕ್ಷ್ಮೀ-ನಾರಾಯಣರು ಈ ಪದವಿಯನ್ನು ಹೇಗೆ ಪಡೆದಿದ್ದಾರೆಂದು ಲಕ್ಷ್ಮೀ-ನಾರಾಯಣರ ಬೇಹದ್ದಿನ ಚರಿತ್ರೆ-ಭೂಗೋಳವನ್ನು ತಿಳಿಸುತ್ತೇವೆಂದು ಹೇಳಿ. ಮುಂದೆ ಹೋದಂತೆ ತಮಗೆ ಕಾಲೇಜಿನಲ್ಲೂ ಸಹ ನಿಮಂತ್ರಣ ಸಿಗುತ್ತದೆ. ಇದು ಈಶ್ವರೀಯ ವಿಶ್ವವಿದ್ಯಾಲಯವಾಗಿದೆ. ಅವರು ಆಧ್ಯಾತ್ಮಿಕ ತಂದೆ ಆಗಿದ್ದಾರೆ. ಅಂದಾಗ ಆತ್ಮರಿಗೆ ಆಧ್ಯಾತ್ಮಿಕ ಜ್ಞಾನವನ್ನು ಕೊಡುತ್ತಾರೆ. ನಿರಾಕಾರ ತಂದೆ ಸಾಕಾರದಲ್ಲಿ ಬಂದು ತಿಳಿಸುತ್ತಾರೆ. ಇದರಲ್ಲಿ ಕೃಷ್ಣನ ಮಾತೇ ಇಲ್ಲ. ಯಾವುದೇ ಮಾತನ್ನು ತಿಳಿದುಕೊಳ್ಳುವುದಿಲ್ಲ. ತಬ್ಬಿಬ್ಬಾಗಿದ್ದಾರೆ. ಸ್ವತಂತ್ರವಾಗಬೇಕೆಂದು ಇಚ್ಛೆ ಇರುತ್ತದೆ ಆದರೆ ಜಗಳ ವೃದ್ಧಿ ಆಗುತ್ತಿರುತ್ತದೆ. ಸ್ವತಂತ್ರ ಬೇಕು ಎಂದು ಹೇಳುತ್ತಾರೆ. ರಾವಣನಿಂದ ಸತ್ಯವಾದಂತ ಸ್ವತಂತ್ರ ನಿಮಗೆ ಸಿಕ್ಕಿದೆ. ಭಾರತವಾಸಿಯರು ನಾವು ಕ್ರಿಶ್ಚಯನ್ನರಿಂದ ಸ್ವತಂತ್ರವನ್ನು ಪಡೆದುಕೊಂಡಿದ್ದೇವೆಂದು ತಿಳಿದಿದ್ದಾರೆ. ಆದರೆ ಎಲ್ಲಿ ಸ್ವತಂತ್ರವಿದೆ! ಸ್ವತಂತ್ರ ನಿಮಗೆ ಸಿಗುತ್ತದೆ ಸ್ವತಂತ್ರರಾಜ್ಯಭಾಗ್ಯ ಸಿಗುತ್ತದೆ. ನೀವು ಸಿಕ್ಕಿದರೆ ಧರಣಿ, ಆಕಾಶ, ಸಾಗರ ಎಲ್ಲವೂ ನಮ್ಮದಾಗಿಬಿಡುತ್ತದೆ ಎಂದು ಗೀತೆಯನ್ನೂ ಸಹ ಕೇಳಿದಿರಲ್ಲವೇ. ಅದರಲ್ಲಿ ಹದ್ದೇ ಇರುವುದಿಲ್ಲ. ಒಳ್ಳೆಯದು.

ಮಧುರಾತಿ ಮಧುರ ಅಗಲಿಹೋಗಿ ಮರಳಿಸಿಕ್ಕಿರುವ ಮಕ್ಕಳಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಮಾತಾಪಿತರನ್ನು ಪೂರ್ತಿ ಫಾಲೋ ಮಾಡಿ ವಿದ್ಯೆಯಲ್ಲಿ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳಬೇಕು. ಈ ಪ್ರಪಂಚದಲ್ಲಿ ಯಾವುದೇ ಆಸಕ್ತಿ ಇಟ್ಟುಕೊಳ್ಳಬಾರದು. ವನವಾಸದಲ್ಲಿ ಇರಬೇಕು.

2. ಈ ಕಣ್ಣಿನಿಂದ ಏನೆಲ್ಲಾ ಕಂಡು ಬರುತ್ತದೋ ಅದನ್ನು ನೋಡುತ್ತಲೂ ಸಹ ನೋಡಬಾರದು. ಪೂರ್ತಿ ನಷ್ಟಮೋಹಿಗಳಾಗಬೇಕು. ಸಂಗಮದಲ್ಲಿ ಸ್ವಲ್ಪನೂ ವ್ಯರ್ಥ ಮಾಡಬಾರದು.

ವರದಾನ: ನಿಮ್ಮ ಕರ್ತವ್ಯದ ಸ್ಮೃತಿಯಿಂದ ಸೇವೆಯ ಫಲ ಮತ್ತು ಬಲ ಪ್ರಾಪ್ತಿ ಮಾಡಿಕೊಳ್ಳುವಂತಹ ವಿಶ್ವ ಕಲ್ಯಾಣಕಾರಿ ಭವ

ಯಾವುದೇ ಕಾರ್ಯ ಮಾಡುತ್ತಾ ತಮ್ಮ ಕರ್ತವ್ಯವನ್ನು ಎಂದೂ ಮರೆಯಬೇಡಿ. ಹೇಗೆ ಪಾಂಡವರು ಗುಪ್ತವೇಶದಲ್ಲಿ ಕೆಲಸ ಮಾಡಿದರು ಆದರೆ ವಿಜಯದ ನಶೆ ಇತ್ತು. ಹಾಗೆ ಭಲೆ ಸರ್ಕಾರಿ ಸೇವೆಯಲ್ಲಿರ ಬಹುದು, ನೌಕರಿ ಮಾಡುತ್ತಿರುವಾಗಲೂ ನಶೆಯಿರಲಿ ನಾನು ವಿಶ್ವಕಲ್ಯಾಣಕಾರಿಯಾಗಿದ್ದೇನೆ ಆಗ ಈ ಸ್ಮøತಿಯಿಂದ ಸ್ವತಃ ಸಮರ್ಥರಾಗಿರುವಿರಿ ಮತ್ತು ಸದಾ ಸೇವಾಭಾವವಿರುವ ಕಾರಣ ಸೇವೆಯ ಫಲ ಮತ್ತು ಬಲ ಸಿಗುತ್ತಿರುವುದು. ಭಾವನೆಯ ಫಲ ಸಿಗುವುದು ಎಂದು ಗಾಯನವಿದೆ ಅಂದರೆ ನಿಮ್ಮ ಸೇವಾ-ಭಾವನೆ ಅನೇಕ ಆತ್ಮಗಳಿಗೆ ಶಾಂತಿ, ಶಕ್ತಿಯ ಫಲ ಕೊಡುವುದು.

ಸ್ಲೋಗನ್: ಈಶ್ವರೀಯ ವಿಧ್ಯಾರ್ಥಿ ಸ್ವರೂಪ ಸದಾ ಸ್ಮøತಿಯಲ್ಲಿದ್ದಾಗ ಮಾಯೆ ಬರಲು ಸಾಧ್ಯವಿಲ್ಲ.